Akashvani : Bangalore
National Bulletin In Kannada
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು

05.11.2024 19.35 hrs

<><*<><>*><>

ಮುಖ್ಯಾಂಶಗಳು

- **ಇದೇ ೨೫ ರಿಂದ ಸಂಸತ್‌ನ ಚಳಿಗಾಲದ ಅಧಿವೇಶನ ಆರಂಭ**
- **ಎರಡನೇ ಹಂತದಲ್ಲಿ ಭಾರತ್ ಬ್ರ್ಯಾಂಡ್‌ನ ಅಕ್ಕಿ, ಗೋಧಿ ಹಿಟ್ಟು ಬಿಡುಗಡೆ**
- **ಶ್ರೀಹರಿಕೋಟಾದ ಬಾಹ್ಯಾಕಾಶ ನಿಲ್ದಾಣದಿಂದ ಮುಂದಿನ ತಿಂಗಳು ಯೂರೋಪಿಯನ್ ಬಾಹ್ಯಾಕಾಶ ಯೋಜನೆ- ಪ್ರೋಬಾ-೩ ಪ್ರಾರಂಭ**
- **ಅಮೆರಿಕದ ಅಧ್ಯಕ್ಷೀಯ ಚುನಾವಣೆ; ಮತದಾನ ಪ್ರಗತಿಯಲ್ಲಿ**

<><*<><>*><>

ರಾಷ್ಟ್ರಪತಿ ದ್ರೌಪದಿ ಮುರ್ಮು ನವದೆಹಲಿಯಲ್ಲಿ ಇಂದು ಮೊದಲ ಏಷ್ಯನ್ ಬೌದ್ಧ ಶೃಂಗಸಭೆಯನ್ನು ಉದ್ಘಾಟಿಸಿದರು. ನಂತರ ಸಭೆ ಉದ್ದೇಶಿಸಿ ಮಾತನಾಡಿದ ರಾಷ್ಟ್ರಪತಿಗಳು, ಭಾರತ ಧಮ್ಮದ ಆಶೀರ್ವಾದ ಹೊಂದಿರುವ ಭೂಮಿಯಾಗಿದ್ದು, ಪ್ರತಿ ಯುಗದಲ್ಲೂ ಮಹಾನ್ ಗುರುಗಳು, ಆಧ್ಯಾತ್ಮಿಕ ನಾಯಕರು ಹೊರಹೊಮ್ಮಿದ್ದಾರೆ ಎಂದು ಹೇಳಿದರು. ಈ ಮಹಾನ್ ಗುರುಗಳಲ್ಲಿ ಗೌತಮಬುದ್ಧ ವಿಶಿಷ್ಟ ಸ್ಥಾನ ಪಡೆದುಕೊಂಡಿದ್ದಾರೆ. ಬುದ್ಧ ಗಯಾದ ಬೋಧಿವೃಕ್ಷ ಕೆಳಗೆ ಸಿದ್ದಾರ್ಥ ಗೌತಮನಿಗೆ ಜ್ಞಾನೋದಯವಾಗಿದ್ದು, ಇತಿಹಾಸದಲ್ಲಿ ಸರಿಸಾಟಿ ಇಲ್ಲದ ಘಟನೆಯಾಗಿದೆ ಎಂದು ಹೇಳಿದರು. ಜಗತ್ತು ಇಂದು ಹಲವು ವಲಯಗಳಲ್ಲಿ ಅಸ್ಥಿತ್ವದ ಬಿಕ್ಕಟ್ಟನ್ನು ಎದುರಿಸುತ್ತಿರುವಾಗ ಬೌದ್ಧ ಚಿಂತನೆಗಳು ಮಾನವ ಕುಲಕ್ಕೆ ಸೂಕ್ತ ಪರಿಹಾರ ನೀಡಲು ಶಕ್ಯವಾಗಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಏಷ್ಯವನ್ನು ಬಲಪಡಿಸುವಲ್ಲಿ ಬೌದ್ಧ ಧರ್ಮವಹಿಸಿರುವ ಪಾತ್ರದ ಕುರಿತು ಚರ್ಚಿಸುವ ಅಗತ್ಯವಿದೆ ಎಂದು ಹೇಳಿದರು. ಎರಡು ದಿನಗಳ ಶೃಂಗಸಭೆಯು ಬೌದ್ಧ ಧರ್ಮದ ಶ್ರೀಮಂತ ಪರಂಪರೆಯನ್ನು ಅನಾವರಣಗೊಳಿಸಲಿದೆ. ಬೌದ್ಧ ಸಮುದಾಯ ಎದುರಿಸುತ್ತಿರುವ ಸಮಕಾಲೀನ ಸವಾಲುಗಳನ್ನು ಪರಿಹರಿಸುವಲ್ಲಿ ಸಂವಾದ ಹಾಗೂ ತಿಳುವಳಿಕೆ ಬೆಳೆಸುವ ಗುರಿಯನ್ನು ಶೃಂಗಸಭೆ ಹೊಂದಿದೆ. ಕೇಂದ್ರ ಸಂಸ್ಕೃತಿ ಸಚಿವಾಲಯ, ಅಂತಾರಾಷ್ಟ್ರೀಯ ಬೌದ್ಧ ಒಕ್ಕೂಟದ-ಐಬಿಸಿ ಸಹಯೋಗದೊಂದಿಗೆ ಬೌದ್ಧಧರ್ಮವನ್ನು ಗೌರವಿಸಲು ಈ ಶೃಂಗಸಭೆಯನ್ನು ಆಯೋಜಿಸಿದೆ.

<><*<><>*><>

ಸಂಸತ್ತಿನ ಚಳಿಗಾಲದ ಅಧಿವೇಶನ ಇದೇ ೨೫ ರಿಂದ ಡಿಸೆಂಬರ್ ೨೦ ರವರೆಗೆ ನಡೆಯಲಿದೆ. ಈ ಕುರಿತು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿರುವ ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು, ನವೆಂಬರ್ ೨೬ ರಂದು ಸಂವಿಧಾನ ಅಂಗೀಕಾರದ ೭೫ ನೇ ವಾರ್ಷಿಕೋತ್ಸವವನ್ನು ಸಂಸತ್ತಿನ ಸೆಂಟ್ರಲ್ ಹಾಲ್‌ನಲ್ಲಿ ಆಚರಿಸಲಾಗುವುದು ಎಂದು ತಿಳಿಸಿದ್ದಾರೆ.

<><*<><>*><>

ನವದೆಹಲಿಯಲ್ಲಿಂದು ಎರಡನೇ ಹಂತದಲ್ಲಿ ಭಾರತ್ ಬ್ರ್ಯಾಂಡ್ ಅಕ್ಕಿ ಮತ್ತು ಗೋಧಿ ಹಿಟ್ಟನ್ನು ಕೇಂದ್ರ ಗ್ರಾಹಕ ವ್ಯವಹಾರಗಳು, ಆಹಾರ, ನಾಗರಿಕ ಸರಬರಾಜು ಸಚಿವ ಪ್ರಲ್ಹಾದ್ ಜೋಶಿ ಬಿಡುಗಡೆಗೊಳಿಸಿದರು. ರೈತರಿಗೆ ನ್ಯಾಯಯುತ ಬೆಲೆಯನ್ನು ಖಾತರಿಪಡಿಸುವುದರ ಜೊತೆಗೆ ಅಗತ್ಯ ಆಹಾರ ವಸ್ತುಗಳ ಬೆಲೆಗಳನ್ನು ಸ್ಥಿರಗೊಳಿಸಲು ಸರ್ಕಾರದ ಸರಣಿ ಕ್ರಮದ ಭಾಗ ಇದಾಗಿದೆ. ಪ್ರತಿ ಕೆ.ಜಿ ಗೆ ೩೦ ರೂಪಾಯಿಯಂತೆ ಭಾರತ್ ಬ್ರ್ಯಾಂಡ್ ಗೋಧಿ ಹಿಟ್ಟು ಲಭ್ಯವಿದೆ. ಇದೇ ವೇಳೆ ನಾಗರಿಕರು ಪ್ರತಿ ಕೆ.ಜಿ ಗೆ ೩೪ ರೂಪಾಯಿಯಂತೆ ಭಾರತ್ ಬ್ರ್ಯಾಂಡ್ ಅಕ್ಕಿಯನ್ನು ಖರೀದಿಸಬಹುದಾಗಿದೆ. ಈ ಸಂದರ್ಭದಲ್ಲಿ ಮಾತನಾಡಿದ ಸಚಿವ ಪ್ರಲ್ಹಾದ್ ಜೋಶಿ, ಭಾರತ್ ಬ್ರ್ಯಾಂಡ್ ಅಕ್ಕಿ ಮತ್ತು ಗೋಧಿ ಹಿಟ್ಟಿನ ಮಾರಾಟವು, ಮಾರುಕಟ್ಟೆಯಲ್ಲಿ ಕೈಗೆಟಕುವ ದರದಲ್ಲಿ ಪೂರೈಕೆಯನ್ನು ಹೆಚ್ಚಿಸಲಿದೆ ಮತ್ತು ಪ್ರಮುಖ ಆಹಾರ ಪದಾರ್ಥಗಳ ಬೆಲೆಯನ್ನು ತಗ್ಗಿಸಲು ಸಹಕಾರಿಯಾಗಿದೆ. ಕೇಂದ್ರೀಯ ಭಂಡಾರ್ ಎನ್‌ಎಫ್‌ಇಡಿ ಮತ್ತು ಎನ್‌ಸಿಸಿಎಫ್ ಮಳಿಗೆಗಳಲ್ಲಿ ಭಾರತ್ ಬ್ರ್ಯಾಂಡ್‌ನ ಉತ್ಪನ್ನಗಳನ್ನು ನಾಗರಿಕರು ಖರೀದಿಸಬಹುದು ಎಂದು ಮಾಹಿತಿ ನೀಡಿದ್ದಾರೆ.

<><*<><>*><>

ಶ್ರೀಹರಿಕೋಟಾ ಬಾಹ್ಯಾಕಾಶ ನಿಲ್ದಾಣದಿಂದ ಭಾರತವು, ಮುಂದಿನ ತಿಂಗಳು ಪ್ರೋಬಾ-೩ ಹೆಸರಿನ ಯೂರೋಪಿಯನ್ ಬಾಹ್ಯಾಕಾಶ ಯೋಜನೆಯನ್ನು ಪ್ರಾರಂಭಿಸಲಿದೆ ಎಂದು ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ  ಡಾ.ಜಿತೇಂದ್ರ ಸಿಂಗ್ ತಿಳಿಸಿದ್ದಾರೆ. ನವದೆಹಲಿಯಲ್ಲಿಂದು ಭಾರತೀಯ ಬಾಹ್ಯಾಕಾಶ ಸಮಾವೇಶ-೩.೦ ಉದ್ದೇಶಿಸಿ ಮಾತನಾಡಿದ ಅವರು, ಈ ಯೋಜನೆಯು ಸೂರ್ಯನ ಕರೋನಾ ಭಾಗವನ್ನು ಸಮೀಪದಿಂದ ಅಧ್ಯಯನ ನಡೆಸಲಿದೆ ಎಂದು ಮಾಹಿತಿ ನೀಡಿದರು. ದೇಶದ ಪ್ರತಿಯೊಂದು ಕ್ಷೇತ್ರವು ಬಾಹ್ಯಾಕಾಶ ತಂತ್ರಜ್ಞಾನವನ್ನು ಬಳಸುತ್ತಿದೆ. ಬಾಹ್ಯಾಕಾಶ ತಂತ್ರಜ್ಞಾನವು ನ್ಯಾವಿಗೇಷನ್, ಉಪಗ್ರಹ ಚಿತ್ರಣ, ಭೂಪ್ರದೇಶದ ಮ್ಯಾಪಿಂಗ್ ಒದಗಿಸುವ ಮೂಲಕ ಸ್ಮಾರ್ಟ್ ಸಿಟಿಗಳ ನಿರ್ಮಾಣಕ್ಕೆ ಉತ್ತೇಜಿಸುತ್ತದೆ ಎಂದು ಸಚಿವ ಡಾ.ಜಿತೇಂದ್ರ ಸಿಂಗ್ ಹೇಳಿದರು. ಮುಂಬರುವ ವರ್ಷಗಳಲ್ಲಿ ಜಾಗತಿಕ ಬಾಹ್ಯಾಕಾಶ

ಆರ್ಥಿಕತೆಯಲ್ಲಿ ಭಾರತದ ಕೊಡುಗೆಯನ್ನು ಶೇಕಡ ೨ ರಿಂದ ಶೇಕಡ ೧೦ಕ್ಕೆ ಹೆಚ್ಚಿಸುವ ಗುರಿಯನ್ನು ಸರ್ಕಾರ ಹೊಂದಿದೆ.  ೨೦೩೦ ರ ವೇಳೆಗೆ ಭಾರತೀಯ ಬಾಹ್ಯಾಕಾಶ ನಿಲ್ದಾಣ ಪ್ರಾರಂಭ ಹಾಗೂ ೨೦೪೭ರ ವೇಳೆಗೆ ಭಾರತೀಯ ಗಗನಯಾತ್ರಿಯನ್ನು ಚಂದ್ರನ ಮೇಲೆ ಇಳಿಸುವ ಗುರಿಯನ್ನು ಭಾರತ ಹೊಂದಿದೆ ಎಂದು ಅವರು ತಿಳಿಸಿದರು.

<><*<><>*><>

ಮಹಾರಾಷ್ಟ್ರ ಮತ್ತು ಜಾರ್ಖಂಡ್ ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ವಿವಿಧ ರಾಜಕೀಯ ಪಕ್ಷಗಳು ಬಿರುಸಿನ ಪ್ರಚಾರ ನಡೆಸುತ್ತಿವೆ. ಮಹಾರಾಷ್ಟ್ರದಲ್ಲಿ ಒಟ್ಟು ೨೮೮ ವಿಧಾನಸಭಾ ಕ್ಷೇತ್ರಗಳಲ್ಲಿ, ಒಟ್ಟಾರೆ ೪ ಸಾವಿರದ ೧೪೦ ಅಭ್ಯರ್ಥಿಗಳು ಅಂತಿಮ ಕಣದಲ್ಲಿದ್ದಾರೆ. ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ್ ಶಿಂಧೆ ಅವರು, ಕೊರೆಗಾಂವ್ ಮತ್ತು ಸತರಾದಲ್ಲಿ ಪಕ್ಷದ ಅಭ್ಯರ್ಥಿ ಪರ ಮತಯಾಚಿಸಿದರು. ಉಪಮುಖ್ಯಮಂತ್ರಿ ದೇವೇಂದ್ರ ಫಡ್ನಾವಿಸ್, ನಾಗ್ಪುರ ನೈಋತ್ಯ ಕ್ಷೇತ್ರದಲ್ಲಿ ಬೃಹತ್ ರ‍್ಯಾಲಿಯಲ್ಲಿ ಪಾಲ್ಗೊಂಡಿದ್ದರು. ಇದೇ ವೇಳೆ ಎನ್‌ಸಿಪಿ ನಾಯಕರಾದ ಶರದ್ ಪವಾರ್ ಮತ್ತು ಅಜಿತ್ ಪವಾರ್ ವಿವಿಧ ಕ್ಷೇತ್ರಗಳಲ್ಲಿ ಪಕ್ಷದ ಅಭ್ಯರ್ಥಿಗಳ ಪರ ಮತಯಾಚಿಸಿದರು. ನಾಳೆ ನಾಗ್ಪುರ ಮತ್ತು ಮುಂಬೈನಲ್ಲಿ ನಡೆಯಲಿರುವ ಚುನಾವಣಾ ರ‍್ಯಾಲಿಗಳಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಭಾಗವಹಿಸಲಿದ್ದಾರೆ ಎಂದು ನಮ್ಮ ಬಾತ್ಮೀದಾರರು ವರದಿ ಮಾಡಿದ್ದಾರೆ. ಜಾರ್ಖಂಡ್‌ನಲ್ಲಿ ಇದೇ ತಿಂಗಳ ೧೩ ರಂದು ಮೊದಲನೇ ಹಂತದ ಚುನಾವಣೆ ನಡೆಯಲಿದೆ. ಈ ಹಿನ್ನೆಲೆಯಲ್ಲಿ ವಿವಿಧ ರಾಜಕೀಯ ನಾಯಕರು ತಮ್ಮ ಪಕ್ಷದ ಅಭ್ಯರ್ಥಿಗಳ ಬಿರುಸಿನ ಪ್ರಚಾರದಲ್ಲಿ ತೊಡಗಿದ್ದಾರೆ. ಉತ್ತರ ಪ್ರದೇಶ ಮುಖ್ಯಮತ್ರಿ ಯೋಗಿ ಆದಿತ್ಯನಾಥ್, ಕೊಡೆರ್ಮಾದ ಡೊಮ್ಚಾಚಿಯಲ್ಲಿ ನಡೆದ ಚುನಾವಣಾ ಪ್ರಚಾರ ಸಭೆ ಉದ್ದೇಶಿಸಿ ಮಾತನಾಡಿದರು. ಇನ್ನೊಂದೆಡೆ ಜೆಎಮ್‌ಎಮ್ ಪಕ್ಷದ ಹಿರಿಯ ನಾಯಕ ಮತ್ತು ಜಾರ್ಖಂಡ್ ಮುಖ್ಯಮಂತ್ರಿ ಹೇಮಂತ್ ಸುರೇನ್, ಪಕ್ಷದ ಅಭ್ಯರ್ಥಿಗಳ ಪರ ಮತಯಾಚಿಸಿದರು. ರಾಂಚಿ ಮತ್ತು ಲೋಹರ್‌ದಾಗದಲ್ಲಿ  ನಡೆದ ಚುನಾವಣಾ ರ‍್ಯಾಲಿಯಲ್ಲಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಭಾಗವಹಿಸಿದ್ದರು. ಇದೇ ವೇಳೆ ಹಜಾರಿಬಾಗ್‌ನ ಮಾಂಡು ಮತ್ತು ರಾಂಚಿಯ ಕಾಂಕೆಯಲ್ಲಿ ನಡೆದ ಚುನಾವಣಾ ಪ್ರಚಾರದಲ್ಲಿ ಐ.ಎನ್.ಡಿ.ಐ ಮೈತ್ರಿಕೂಟದ ಅಭ್ಯರ್ಥಿಗಳ ಪರವಾಗಿ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತಯಾಚಿಸಿದರು.

<><*<><>*><>

ಅಮೆರಿಕದಲ್ಲಿ ಅಧ್ಯಕ್ಷೀಯ ಚುನಾವಣೆಗೆ ಮತದಾನ ಪ್ರಕ್ರಿಯೆ ಆರಂಭಗೊಂಡಿದ್ದು, ರಿಪಬ್ಲಿಕನ್ ಪಕ್ಷದ ಅಭ್ಯರ್ಥಿ ಡೊನಾಲ್ಡ್ ಟ್ರಂಪ್ ಮತ್ತು ಡೆಮಾಕ್ರಟಿಕ್ ಅಭ್ಯರ್ಥಿ ಕಮಲಾ ಹ್ಯಾರಿಸ್ ಅವರ ನಡುವೆ ತೀವ್ರ ಪೈಪೋಟಿ ಏರ್ಪಟ್ಟಿದೆ.  ಮತದಾನ ಪೂರ್ಣಗೊಳ್ಳುತ್ತಿದ್ದಂತೆಯೇ ಚುನಾವಣಾ

ಫಲಿತಾಂಶ ನಿರೀಕ್ಷಿಸಬಹುದಾದರೂ ಮುಂದಿನ ಅಮೆರಿಕಾ ಅಧ್ಯಕ್ಷರು ಯಾರೆಂದು ತಕ್ಷಣ ನಿರ್ಧಾರವಾಗುವುದಿಲ್ಲ. ಅಮೆರಿಕಾದಲ್ಲಿ, ಅಧ್ಯಕ್ಷರ ಚುನಾವಣಾ ಪ್ರಕ್ರಿಯೆಯು ಎಲೆಕ್ಟೋರಲ್ ಕಾಲೇಜ್ ಎಂಬ ಪರೋಕ್ಷ ಚುನಾವಣಾ ವ್ಯವಸ್ಥೆಯಿಂದ ನಡೆಯುವುದು. ಮುಂದಿನ ಅಧ್ಯಕ್ಷರಾಗಲು ಬಯಸುವ ಅಭ್ಯರ್ಥಿಗೆ ೫೩೮ ಎಲೆಕ್ಟೋರಲ್ ಕಾಲೇಜು ಮತಗಳಲ್ಲಿ ೨೭೦ ಅಥವಾ ಹೆಚ್ಚಿನ ಮತಗಳ ಸಂಪೂರ್ಣ ಬಹುಮತದ ಅಗತ್ಯವಿದೆ. ಮುಂದಿನ ವರ್ಷ ಜನವರಿ ೬ ರಂದು ಅಮೆರಿಕ ಸಂಸತ್ತಿನ ಜಂಟಿ ಅಧಿವೇಶನದಲ್ಲಿ ಚುನಾವಣಾ ಮತಗಳ ಎಣಿಕೆ ಕಾರ್ಯ ನಡೆಯಲಿದೆ.

<><*<><>*><>

ಕೆನಡಾದಲ್ಲಿ ಹಿಂದೂ ದೇವಾಲಯದ ಮೇಲೆ ನಡೆದ ದಾಳಿ ಅತ್ಯಂತ ಕಳವಳಕಾರಿ ಎಂದು ವಿದೇಶಾಂಗ ವ್ಯವಹಾರಗಳ ಖಾತೆ ಸಚಿವ ಡಾ.ಎಸ್.ಜೈಶಂಕರ್ ಹೇಳಿದ್ದಾರೆ. ಕ್ಯಾನ್‌ಬೆರಾದಲ್ಲಿಂದು ಆಸ್ಟ್ರೇಲಿಯಾ ವಿದೇಶಾಂಗ ಸಚಿವ ಪೆನ್ನಿವಾಂಗ್ ಅವರೊಂದಿಗೆ ಜಂಟಿ ಸುದ್ದಿಗೋಷ್ಠಿ ನಡೆಸಿದ ಡಾ.ಎಸ್.ಜೈಶಂಕರ್, ಉಗ್ರಗಾಮಿ ಶಕ್ತಿಗಳಿಗೆ ಕೆನಡಾದಲ್ಲಿ ಜಾಗ ಕಲ್ಪಿಸಲಾಗುತ್ತಿದೆ ಎಂದು ಕಳವಳ ವ್ಯಕ್ತಪಡಿಸಿದರು. ಯಾವುದೇ ನಿರ್ದಿಷ್ಟ ಸಾಕ್ಷಿ, ಪುರಾವೆಗಳಲ್ಲದೆ ಆರೋಪ ಮಾಡುವ ಪರಿಪಾಟದಲ್ಲಿ ಕೆನಡಾ ತೊಡಗಿಸಿಕೊಂಡಿದೆ. ಭಾರತೀಯ ರಾಜತಾಂತ್ರಿಕರ ಮೇಲೆ ಕೆನಡಾ ಕಣ್ಗಾವಲು ಇರಿಸಿರುವುದನ್ನು ಒಪ್ಪಲು ಸಾಧ್ಯವಿಲ್ಲ ಎಂದು ಹೇಳಿದರು. ಹಿಂದೂ ದೇವಾಲಯದ ಮೇಲೆ ನಡೆದ ದಾಳಿಯ ಬಗ್ಗೆ ಕೇಳಲಾದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಆಸ್ಟ್ರೇಲಿಯಾ ವಿದೇಶಾಂಗ ಸಚಿವ ಪೆನ್ನಿವಾಂಗ್, ಈ ದಾಳಿಗಳು ಭಾರತೀಯ ಸಮುದಾಯದಲ್ಲಿ ಅಸಮಾಧಾನ ಉಂಟು ಮಾಡಿವೆ ಎಂದು ಹೇಳಿದರು. ಇದಕ್ಕೂ ಮುನ್ನ, ಡಾ.ಎಸ್.ಜೈಶಂಕರ್ ಕ್ಯಾನ್‌ಬೆರಾದಲ್ಲಿಂದು ಆಸ್ಟ್ರೇಲಿಯಾ ವಿದೇಶಾಂಗ ಸಚಿವ ಪೆನ್ನಿವಾಂಗ್ ಅವರೊಂದಿಗೆ ೧೫ನೇ ಭಾರತ-ಆಸ್ಟ್ರೇಲಿಯಾ ವಿದೇಶಾಂಗ ಸಚಿವರ ಸಂವಾದದಲ್ಲಿ ಪಾಲ್ಗೊಂಡಿದ್ದರು. ಭಾರತ ಮತ್ತು ಆಸ್ಟ್ರೇಲಿಯಾದ ನೆರೆ-ಹೊರೆ ದೇಶಗಳು, ಇಂಡೋ-ಫೆಸಿಫಿಕ್ ವಲಯ, ಪಶ್ಚಿಮ ಏಷ್ಯಾ, ಉಕ್ರೇನ್ ಹಾಗೂ ಜಾಗತಿಕ ಕಾರ್ಯತಂತ್ರ ಸನ್ನಿವೇಶಗಳ ಬಗ್ಗೆ ಉಭಯ ನಾಯಕರು ಚರ್ಚೆ ನಡೆಸಿದರು. ಭಾರತ-ಆಸ್ಟ್ರೇಲಿಯಾ ನಡುವಣ ಸಮಗ್ರ ಕಾರ್ಯತಂತ್ರ ಪಾಲುದಾರಿಕೆ ಸ್ಥಿರವಾಗಿ ಬೆಳೆಯುತ್ತಿದೆ. ಇದು ಬಲಿಷ್ಠ ರಾಜಕೀಯ ಸಂಬಂಧಗಳು, ದೃಢವಾದ ರಕ್ಷಣೆ, ಭದ್ರತಾ ಸಹಕಾರ, ವಿಸ್ತರಿತ ವ್ಯಾಪಾರ, ಹೆಚ್ಚಿನ ಚಲನಶೀಲತೆ ಹಾಗೂ ಆಳವಾದ ಶೈಕ್ಷಣಿಕ ಸಂಬಂಧಗಳಲ್ಲಿ ಪ್ರತಿಫಲನಗೊಳ್ಳುತ್ತಿದೆ ಎಂದು ಡಾ.ಎಸ್.ಜೈಶಂಕರ್ ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ಹೇಳಿದ್ದಾರೆ.

<><*<><>*><>

ನೀರು ನಿರ್ವಹಣೆ, ಸಂರಕ್ಷಣೆ ಮತ್ತು ಸುಸ್ಥಿರತೆಯ ಬಗ್ಗೆ ಅರಿವು ಮತ್ತು ಸಂವೇದನೆಯನ್ನು ಮೂಡಿಸಲು ನೀತಿ ಆಯೋಗ ನಾಳೆಯಿಂದ ೧೫ ದಿನಗಳ 'ಜಲ ಉತ್ಸವ'ವನ್ನು ಪ್ರಾರಂಭಿಸಲಿದೆ. ಕಳೆದ ವರ್ಷ ಡಿಸೆಂಬರ್‌ನಲ್ಲಿ ನಡೆದ ೩ನೇ ಮುಖ್ಯ ಕಾರ್ಯದರ್ಶಿಗಳ ಸಮ್ಮೇಳನದಲ್ಲಿ 'ನಾಡಿ ಉತ್ಸವ' ಮಾದರಿಯಲ್ಲಿ 'ಜಲ ಉತ್ಸವ'ದ ಕಲ್ಪನೆಯನ್ನು ಪ್ರಸ್ತಾಪಿಸಿದ ಪ್ರಧಾನಿ ನರೇಂದ್ರ ಮೋದಿಯವರ ದೂರದೃಷ್ಟಿಯನ್ನು ಈ ಅಭಿಯಾನ ಅನುಸರಿಸುತ್ತದೆ.

ಇದೇ ೭ ರಿಂದ ೨೪ ರವರೆಗೆ ೨೦ ಮಹತ್ವಾಕಾಂಕ್ಷೆಯ ಜಿಲ್ಲೆಗಳು ಮತ್ತು ಬ್ಲಾಕ್‌ಗಳಲ್ಲಿ ಜಲ ಉತ್ಸವವನ್ನು ಆಚರಿಸಲಾಗುತ್ತದೆ. ಇದು ಜಲಸಂಪನ್ಮೂಲಗಳ ಸಂರಕ್ಷಣೆಯಲ್ಲಿ ಸಮುದಾಯದ ಭಾಗವಹಿಸುವಿಕೆಗೆ ಅನುವು ಮಾಡಿಕೊಡುತ್ತದೆ. ಮನೆಗಳಲ್ಲಿ ಸಮರ್ಥ ನೀರಿನ ಬಳಕೆ, ಉಪಯುಕ್ತತೆಗಳು ಮತ್ತು ನೀರಿನ ನಿರ್ವಹಣೆಯ ಕಡೆಗೆ ಜವಾಬ್ದಾರಿಯ ಪ್ರಜ್ಞೆಯನ್ನು ಮೂಡಿಸಲು ಪ್ರಯತ್ನಿಸುತ್ತದೆ.

<><*<><>*><>

ಅಪರಾಧ ತನಿಖೆ ಹಾಗೂ ನ್ಯಾಯಾಂಗ ವ್ಯವಸ್ಥೆಯಲ್ಲಿ ತಂತ್ರಜ್ಞಾನ ಬಳಕೆಯಿಂದ ಎಲ್ಲರಿಗೂ ಸಕಾಲದಲ್ಲಿ ನ್ಯಾಯ ದೊರಕಿಸಲು ಸಕಾರಾತ್ಮಕ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಹೇಳಿದ್ದಾರೆ. ದೆಹಲಿಯಲ್ಲಿಂದು ಸಾಂವಿಧಾನಿಕ ಮತ್ತು ಸಂಸದೀಯ ಅಧ್ಯಯನ ಸಂಸ್ಥೆ - ಐಸಿಪಿಎಸ್ ಆಯೋಜಿಸಿದ್ದ ನೂತನ ಅಪರಾಧ ಕಾನೂನುಗಳು ಕುರಿತ ಕಾರ್ಯಾಗಾರ ಉದ್ದೇಶಿಸಿ ಅವರು ಮಾತನಾಡಿದರು. ನೂತನ ಕಾನೂನುಗಳ ಜಾರಿಗೆ ಮುನ್ನ ಹಲವು ವರ್ಷಗಳ ಕಾಲ ಎಲ್ಲ ಭಾಗೀದಾರರೊಂದಿಗೆ ಸಮಾಲೋಚನೆ, ಚರ್ಚೆ ನಡೆಸಿ ಎಲ್ಲರ ಅಭಿಪ್ರಾಯ ಪಡೆಯಲಾಗಿದೆ ಎಂದರು. ಸಮಾಜದ ಕಟ್ಟಕಡೆಯ ವ್ಯಕ್ತಿಗೂ ನ್ಯಾಯ ದೊರಕಿಸುವುದು ಅತ್ಯಗತ್ಯವಾಗಿದ್ದು, ಈ ನಿಟ್ಟಿನಲ್ಲಿ ನೂತನ ಕಾನೂನುಗಳು ಪರಿಣಾಮಕಾರಿಯಾಗಲಿವೆ. ಜಗತ್ತಿನಲ್ಲೇ ಭಾರತೀಯ ನ್ಯಾಯ ವ್ಯವಸ್ಥೆಯ ಬಗ್ಗೆ ಜನರಲ್ಲಿ ಹೆಚ್ಚಿನ ವಿಶ್ವಾಸವಿದ್ದು, ನೂತನ ಕಾನೂನುಗಳು ಈ ವಿಶ್ವಾಸಾರ್ಹತೆಯನ್ನು ಇನ್ನಷ್ಟು ಹೆಚ್ಚಿಸಲಿವೆ ಎಂದು ಸ್ಪೀಕರ್ ಓಂ ಬಿರ್ಲಾ ಹೇಳಿದರು.

<><*<><>*><>

ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ- ಇಸ್ರೋ, ಮಂಗಳ ಗ್ರಹಕ್ಕೆ ತನ್ನ ಮೊದಲ ಮಿಷನ್- ಮಂಗಳಯಾನ ಉಪಗ್ರಹ ಉಡಾವಣೆಗೊಳಿಸಿ ಇಂದಿಗೆ ೧೧ ವರ್ಷ ಪೂರ್ಣಗೊಂಡಿದೆ. ೨೦೧೩ರ ಇದೇ ದಿನ ಮಂಗಳಯಾನ ಎಂದು ಕರೆಯಲಾಗುವ ಮಾರ್ಸ್ ಆರ್ಬಿಟರ್ ಮಿಷನ್ - MOM ಅನ್ನು ಭಾರತ ಯಶಸ್ವಿಯಾಗಿ ಉಡಾವಣೆ ಮಾಡಿತ್ತು.